UNIVERSAL SCHOOL OF ADMINISTRATION
Gururayanapura, Koluru Village, Ramohalli Post, Tavarekere Hobli, Bengaluru-560 074.
Affiliated to Bangalore University

# ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಶನ್

ಗುರುರಾಯನಪುರ, ಕೋಲೂರು ವಿಲೇಜ್, ರಾಮೋಹಳ್ಳಿ ಪೋಸ್ಟ್, ಬೆಂಗಳೂರು ದಕ್ಷಿಣ, ಬೆಂಗಳೂರು–560074

## ಕನ್ನಡ ವಿಭಾಗ (KANNADA DEPARTMENT)

## ದೂರದೃಷ್ಟಿ : (Vision)

ವಿದ್ಯಾರ್ಥಿಗಳನ್ನು ಕನ್ನಡ ನಾಡು ನುಡಿಯೊಂದಿಗೆ ಸಂವರ್ಧನೆಗೊಳಿಸುತ್ತಾ, ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೇಕಾದ ಜ್ಞಾನ ಹಾಗೂ ಬದ್ದತೆಯನ್ನು ಬೆಳೆಸುವುದು.

## ಚಲನಾತ್ಮಕತೆ : (Mission)

ವಿದ್ಯಾರ್ಥಿಗಳಲ್ಲಿ ಬೌದ್ಧಿಕ ಚಿಂತನೆಗಳನ್ನು ಬೆಳೆಸುತ್ತಾ, ಕನ್ನಡ ಭಾಷೆ ಹಾಗೂ ಸಾಹಿತ್ಯದ ಅರಿವಿನೊಂದಿಗೆ ಸ್ಪರ್ಧಾ ಜಗತ್ತಿಗೆ ಬೇಕಾದ ತಿಳುವಳಿಕೆ ಹಾಗೂ ಕುಶಲತೆಯನ್ನು ಮೂಡಿಸಿ ಆತ್ಮ ವಿಶ್ವಾಸದ ವ್ಯಕ್ತಿತ್ವವನ್ನು ರೂಪಿಸುವುದು.

## ಉದ್ದೇಶಗಳು (OBJECTIVE)

ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಅರಿಯುವಿಕೆ

ಕನ್ನಡ ಸಾಹಿತ್ಯದ ಇತಿಹಾಸದ ತಿಳುವಳಿಕೆ

ಕನ್ನಡದ ಭಾಷೆ ಹಾಗೂ ಸಾಹಿತ್ಯದ ಸಮಗ್ರ ಬೆಳವಣಿಗೆಗೆ ಶ್ರಮಿಸುವುದು

ಕನ್ನಡ ಸಾಹಿತ್ಯದ ಮೂಲಕ ಮೌಲ್ಯಗಳನ್ನು ಬೆಳೆಸುವುದು


ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೇಕಾದ ಮನೋಭಾವವನ್ನು ವೃದ್ಧಿಸುವುದು


## ಕನ್ನಡ ವಿಭಾಗದ ಕಾರ್ಯಕ್ರಮಗಳ ವರದಿ

ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಶನ್ ಕಾಲೇಜಿನ ಕನ್ನಡ ವಿಭಾಗವು ೨೦೦೭ ರಿಂದ ಸಕ್ರೀಯವಾಗಿ ಹಾಗೂ ಸೃಜನಶೀಲವಾಗಿ ಕಾರ್ಯನಿರ್ವಹಿಸುತ್ತಾ ಬರುತ್ತಿದೆ. ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಬೆಳವಣಿಗೆಯ ಹಿನ್ನಲೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಾ ಬರುತ್ತಿದೆ. ಕನ್ನಡದ ಅಸ್ಮಿತೆಯನ್ನು ಕಾಪಾಡುತ್ತಾ ಬಾಷೆಯ ಮೂಲಕ ನಮ್ಮ ವ್ಯಕ್ತಿತ್ವದ ವಿಕಸನಕ್ಕೆ ಹಾಗೂ ಸಂವಹನ ಕೌಶಲ್ಯ ವೃದ್ಧಿಗೆ ಕನ್ನಡ ವಿಭಾಗ ಅವಿತರವಾಗಿ ಶ್ರಮಿಸುತ್ತಿದೆ. ಕನ್ನಡ ವಿಭಾಗದ ಮುಖ್ಯಸ್ಥರಾಗಿ ಡಾ.ರಾಮಕೃಷ್ಣ ಹೆಚ್.ಕೆ ಹಾಗೂ ಪ್ರಾಧ್ಯಾಪಕರಾದ ಡಾ.ಗಿರೀಶ್ ರವರು ನೇತೃತ್ವದಲ್ಲಿ ಕನ್ನಡ ವಿಭಾಗ ಹಲವಾರು ವಿಭಿನ್ನ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದೆ. ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಕನ್ನಡ ವಿದ್ಯಾರ್ಥಿಗಳಿಗೆ ವಿಶೇಷ ಮಾರ್ಗದರ್ಶನ ನೀಡುತ್ತಿದೆ. ಅಂತರ ಕಾಲೇಜ್ ಪ್ರಬಂಧ ಸ್ಪರ್ಧೆ ಮತ್ತು ರಸಪ್ರಶ್ನೆ ಸ್ಪರ್ಧೆಯನ್ನು ಬಹಳ ಅದ್ಭುತವಾಗಿ ಆಯೋಜನೆ ಮಾಡಿ ಯಶಸ್ವಿಗೊಳಿಸಲಾಗಿದೆ. ಭಾರತದಲ್ಲಿ ಕ್ರೀಡಾ ಸಂಸ್ಕೃತಿಯನ್ನು ಉತ್ತೇಜಿಸುವುದರ ಮಹತ್ವ ಮತ್ತು ಸವಾಲುಗಳು ಕುರಿತು ನಮ್ಮ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಕನ್ನಡ ಜಾನಪದ ಸಾಹಿತ್ಯದಲ್ಲಿ ಗ್ರಾಮಜೀವನದ ಸ್ವರೂಪದ ಬಗ್ಗೆ ಕಾರ್ಯಕ್ರಮವನ್ನು ಆಯೋಜನೆ ಮಾಡಿದೆ. ಕನ್ನಡ ಸಾಹಿತ್ಯದಲ್ಲಿ ಮಹಾತ್ಮ ಗಾಂಧಿ ನಿಲುವುಗಳು ಒಂದು ಚರ್ಚೆ ಎನ್ನುವ ವಿಷಯದ ಮೇಲೆ ವಿಶೇಷ ಉಪನ್ಯಾಸವನ್ನು ನೀಡಲಾಗಿದೆ. ಮತ್ತೊಂದು ವಿಶೇಷ ಉಪನ್ಯಾಸ ರಾಷ್ಟ್ರೀಯ ಮತದಾರ ದಿನಾಚರಣೆಗೆ ಸಂಬಧಿಸಿದಂತೆ ನೀಡಲಾಗಿದೆ. ಕನ್ನಡ ಯುವ ಕವಿಗಳಿಂದ ಆನ್‌ಲೈನ್ ಕವಿಗೋಷ್ಠಿ ಏರ್ಪಡಿಸಲಾಗಿದೆ. ನಂತರ ತಂತ್ರಜ್ಞಾನದ ಮುಖಾಂತರ ಸಾಹಿತ್ಯ ಪಠ್ಯಗಳ ಪ್ರದರ್ಶನವನ್ನು ಮಾಡಲಾಗಿದೆ. ವಿದ್ಯಾರ್ಥಿಗಳಿಗೆ ಅಂತರ ತರಗತಿ ಜಾನಪದ ಸಮೂಹ ಗೀತೆ ಸ್ಪರ್ಧೆಯನ್ನು ಮಾಡಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆ ಹಾಗೂ ಅಂಬೇಡ್ಕರ್ ಬರಹಗಳಿಗೆ ಅನುಗುಣವಾಗಿ : ಒಂದು ಉಪನ್ಯಾಸ ನಡೆಸಲಾಗಿದೆ. ನಮ್ಮ ಕನ್ನಡ ವಿಭಾಗದ ವಿದ್ಯಾರ್ಥಿಗಳನ್ನು ಚಂದ್ರಗಿರಿಯ ತೀರದಲ್ಲಿ ನಾಟಕ ವೀಕ್ಷಣೆಗೆ ಕಲಾ ಗ್ರಾಮಕ್ಕೆ ಕರೆದುಕೊಂಡು ಹೋಗಿ ನಾಟಕವನ್ನು ತೋರಿಸಲಾಯಿತು. ಕನ್ನಡ ವಿಭಾಗದ ವತಿಯಿಂದ 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ನಿಲುವು' ಎಂಬ ವಿಷಯದ ಕುರಿತು ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಯಿತು. ಉದ್ಘಾಟನಾ ಕಾರ್ಯವನ್ನು ಯೂನಿವರ್ಸಲ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್‌ನ ಛೇರ್ಮನ್ ಆದಂತಹ ಶ್ರೀ ಆರ್.ಉಪೇಂದ್ರ ಶೆಟ್ಟಿ ಅವರು ನೆರವೇರಿಸಿ ಇಂತಹ ವಿಷಯದ ಮೇಲೆ ಕನ್ನಡ ವಿಭಾಗ ವಿಚಾರ ಸಂಕಿರಣವನ್ನು ಮಾಡುತ್ತಿರುವುದಕ್ಕೆ ಅಭಿನಂದನೆಗಳನ್ನು ತಿಳಿಸುತ್ತೇನೆ ಎಂದು ಹೇಳಿದರು. ಈ ವಿಚಾರ ಸಂಕಿರಣಕ್ಕೆ ಮುಖ್ಯ ಅತಿಥಿಗಳಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ವಿಭಾಗದ ನಿವೃತ್ತ ಪ್ರಾಧ್ಯಾಪಕರೂ ಹಾಗೂ ನಾಡಿನ ಹಿರಿಯ ಕಥೆಗಾರರಾದಂತಹ ಡಾ. ಅಮರೇಶ ನುಗಡೋಣಿ ಅವರು ಆಗಮಿಸಿ ಸಾಹಿತ್ಯದಲ್ಲಿ ಸಾಮಾಜಿಕ ನಿಲುವುಗಳ ಪಾತ್ರ, ಮಹತ್ವ ಕುರಿತಂತೆ ಅತ್ಯುಪಯುಕ್ತ ವಿಷಯಗಳನ್ನು ಹಂಚಿಕೊಂಡು ವಿಚಾರ ಸಂಕಿರಣಕ್ಕೆ ಒಂದು ದಿಕ್ಸೂಚಿಯನ್ನು ಒದಗಿಸಿದರು. ಈ ವಿಚಾರ ಸಂಕಿರಣಕ್ಕೆ ಮತ್ತೊಬ್ಬ ಸಂಪನ್ಮೂಲ ವ್ಯಕ್ತಿಗಳಾಗಿ ನಾಡಿನ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕಿಯಾಗಿ ಕಾರ್ಯನಿರ್ವಹಿಸಿದ ಹಾಗೂ ನಾಡಿನ ಖ್ಯಾತ ಕವಯಿತ್ರಿ, ಸ್ತ್ರೀವಾದಿ ಚಿಂತಕಿಯಾಗಿರುವ ಡಾ. ಮಮತಾ ಜಿ ಸಾಗರ್ ಅವರು ಆಗಮಿಸಿ ಸಾಹಿತ್ಯ ವಲಯದಲ್ಲಿ ಕಂಡುಬರುವ 'ಲಿಂಗ ರಾಜಕಾರಣ'ದ ಬಗೆಗೆ ಕಟುವಾಗಿ ಟೀಕಿಸುತ್ತಾ, ಕೇವಲ 'ಮಹಿಳೆ' ಎಂಬ ಕಾರಣದಿಂದ ಸಾಹಿತ್ಯ ವಲಯದಲ್ಲಿ ಆಕೆಗೆ ಸೂಕ್ತ ಪ್ರಾತಿನಿಧ್ಯ ನೀಡದೆ ಇರುವ ಅಸಮಾನತೆಯ ಕುರಿತು ಹೇಳಿದರು. ಈ ವಿಚಾರ ಸಂಕಿರಣದ ಸಮಾರೋಪ ಸಮಾರಂಭಕ್ಕೆ ವಿಶೇಷ ಆಹ್ವಾನಿತರಾಗಿ ನಾಡಿನ ಹಿರಿಯ ಸಾಹಿತಿಗಳಾದ ಡಾ. ಎಲ್.ಎನ್.ಮುಕುಂದರಾಜ್ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಡಾ. ಹೊನ್ನುಸಿದ್ದಾರ್ಥ ಅವರು ಆಗಮಿಸಿದ್ದರು.

# UNIVERSAL SCHOOL OF ADMINISTRATION
Gururayanapura, Koluru Village, Ramohalli Post, Tavarekere Hobli, Bengaluru-560 074.
Affiliated to Bangalore University


## ಯುವ ಕವಿಗಳಿಂದ ಆನ್‌ಲೈನ್ ಕವಿಗೋಷ್ಠಿ



ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಕನ್ನಡ ವಿದ್ಯಾರ್ಥಿಗಳಿಗೆ ವಿಶೇಷ ಮಾರ್ಗದರ್ಶನ






# UNIVERSAL SCHOOL OF ADMINISTRATION
Gururayanapura, Koluru Village, Ramohalli Post, Tavarekere Hobli, Bengaluru-560 074.
Affiliated to Bangalore University


## ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಕನ್ನಡ ವಿದ್ಯಾರ್ಥಿಗಳಿಗೆ ವಿಶೇಷ ಮಾರ್ಗದರ್ಶನ






# UNIVERSAL SCHOOL OF ADMINISTRATION
Gururayanapura, Koluru Village, Ramohalli Post, Tavarekere Hobli, Bengaluru-560 074.
Affiliated to Bangalore University


ಕನ್ನಡ ವಿಭಾಗದ ವಿದ್ಯಾರ್ಥಿಗಳು ಚಂದ್ರಗಿರಿಯ ತೀರದಲ್ಲಿ ನಾಟಕ ವೀಕ್ಷಣೆ ಮಾಡುತ್ತಿರುವುದು





ಅಂತರ ತರಗತಿ ಜಾನಪದ ಸಮೂಹ ಗೀತೆ ಸ್ಪರ್ಧೆಯ ಚಿತ್ರಗಳು





# UNIVERSAL SCHOOL OF ADMINISTRATION

Gururayanapura, Koluru Village, Ramohalli Post, Tavarekere Hobli, Bengaluru-560 074.
Affiliated to Bangalore University

ಕನ್ನಡ ಸಾಹಿತ್ಯದಲ್ಲಿ ಭಾಷಾ ಅಭಿಮಾನದ ಪ್ರಸಂಗಗಳ ಬಗ್ಗೆ ವಿಶೇಷ ಉಪನ್ಯಾಸ






# UNIVERSAL SCHOOL OF ADMINISTRATION

Gururayanapura, Koluru Village, Ramohalli Post, Tavarekere Hobli, Bengaluru-560 074.
Affiliated to Bangalore University

ಕನ್ನಡ ವಿಭಾಗದ ವತಿಯಿಂದ 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ನಿಲುವು' ಎಂಬ ವಿಷಯದ ಕುರಿತು ರಾಷ್ಟ್ರಮಟ್ಟದ ವಿಚಾರ ಸಂಕಿರಣ ಪೋಟೋಗಳು






# UNIVERSAL SCHOOL OF ADMINISTRATION
**Gururayanapura, Koluru Village, Ramohalli Post, Tavarekere Hobli, Bengaluru-560 074.**
**Affiliated to Bangalore University**

ಕನ್ನಡ ವಿಭಾಗದ ವತಿಯಿಂದ 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ನಿಲುವು' ಎಂಬ ವಿಷಯದ ಕುರಿತು ರಾಷ್ಟ್ರಮಟ್ಟದ ವಿಚಾರ ಸಂಕಿರಣ ಪೋಟೋಗಳು






**ಕನ್ನಡ ಸಾಹಿತ್ಯದಲ್ಲಿ ಮಹಾತ್ಮ ಗಾಂಧಿ ನಿಲುವುಗಳು ಒಂದು ಚರ್ಚೆ ಎನ್ನುವ ವಿಷಯದ ಮೇಲೆ ವಿಶೇಷ ಉಪನ್ಯಾಸದ ಭಾವಚಿತ್ರಗಳು**







# UNIVERSAL SCHOOL OF ADMINISTRATION

Gururayanapura, Koluru Village, Ramohalli Post, Tavarekere Hobli, Bengaluru-560 074.
Affiliated to Bangalore University

**ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆ ಹಾಗೂ ಅಂಬೇಡ್ಕರ್ ಬರಹಗಳಿಗೆ ಅನುಗುಣವಾಗಿ : ಒಂದು ಉಪನ್ಯಾಸ ನಡೆಸಿದ ಭಾವಚಿತ್ರಗಳು**



# UNIVERSAL SCHOOL OF ADMINISTRATION

Gururayanapura, Koluru Village, Ramohalli Post, Tavarekere Hobli, Bengaluru-560 074.
Affiliated to Bangalore University

ಮಹಾತ್ಮ ಗಾಂಧೀಜಿಯವರ ಬದುಕು ಹಾಗೂ ಹೋರಾಟ ವಿಶೇಷ ಉಪನ್ಯಾಸದ ಭಾವಚಿತ್ರ

ಪ್ರೋ ಜೀವನ್ ಕುಮಾರ್ ರವರಿಂದ







# UNIVERSAL SCHOOL OF ADMINISTRATION
**Gururayanapura, Koluru Village, Ramohalli Post, Tavarekere Hobli, Bengaluru-560 074.**
**Affiliated to Bangalore University**


## ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಬೇಕಾದ ಮನೋಭಾವದ ಕುರಿತು ವಿಶೇಷ ಉಪನ್ಯಾಸ



**SYLLABUS**

**ವಾಣಿಜ್ಯ ಕನ್ನಡ – ೩ ಪಠ್ಯಕ್ರಮ**

**ಬಿ.ಕಾಂ ಮೂರನೇ ಸೆಮಿಸ್ಟರ್ ಪಠಿವಿಡಿ**

**ಘಟಕ–೧: ಮನರಂಜನಾ ಮಾಧ್ಯಮ**

೧.೧೧ ಹುಚ್ಚೇಗೌಡನ ಮೈಕ್ ಸೆಟ್ಟು –ಕೇಶವರೆಡ್ಡಿ ಹಂದ್ರಾಳ ।

ಪೂರಕ: ಆಕಾಶವಾಣಿ ಈಗ ಚಿತ್ರಗೀತೆಗಳ ಕಾರ್ಯಕ್ರಮ –ನೀತಾರಾವ್

೧.೨: ನಿದ್ದೆ ಮಾಡೋ ದೇವರಂಥ ಗಾಂಧಿ –ಚ.ಹ. ರಘುನಾಥ ।

ಪೂರಕ: ಲೋಹಿತ್ ಎಂಬ ಮರಿಮುದ್ದು –ಶರಣು ಹುಲ್ಲೂರು

**ಘಟಕ–೨: ಮಾರುಕಟ್ಟೆ**

೨.೧: ಸೂಪರ್ ಮಾರ್ಕೆಟ್ಗಳು ಮತ್ತು ಕೊಗ್ಗ ಕಾಮತರ ದಿನಸಿ ಅಂಗಡಿ

–ಮುಜಾಫರ್ ಅಸ್ಸಾದಿ ಪೂರಕ: ಸಾಂಸ್ಕೃತಿಕ ಜಾಗತೀಕರಣ ಮತ್ತು ಕನಸುಗಳ ಮಾರುಕಟ್ಟೆ –ಸಿದ್ಧನಗೌಡ ಪಾಟೀಲ

೨.೨: ಹಕೂನ ಮಟಾಟ –ನಾಗರಾಜ ವಸ್ತಾರೆ ।

ಪೂರಕ: ವಾಣಿಜ್ಯ ನಿರ್ಬಂಧ –ವಿನಯಲಾಲ್, ಕನ್ನಡಕ್ಕೆ: ಜಿ.ರಾಜಶೇಖರ

**ಘಟಕ–೩: ಲಿಂಗ ಸಮಾನತೆ**

೩.೧: ಮದುವೆಗಳು ಸ್ವರ್ಗದಲ್ಲಿ ಕೆ.ಸರಸ್ವತಿ ಅಮ್ಮ, ಕನ್ನಡಕ್ಕೆ: ಸುಕನ್ಯಾ ಕನಾರ

ಪೂರಕ: ಸೀತೆಯ ಸಾವು –ಸ. ಉಷಾ ೩.೨: ಪುಲಪೇಡಿ –ಗಂಗಾ ಪಾದೇಕಲ್

ಪೂರಕ: ನಿಮ್ಮ ಚರಿತ್ರೆಯಲ್ಲಿ ನಮಗೆ ಜಾಗವಿಲ್ಲ –ಪಿ.ಚಂದ್ರಿಕಾ

**ಘಟಕ–೪: ಸಂಕೀರ್ಣ**

೪.೧: ಹಣಕಾಸು ಸಾಕ್ಷರತೆ –ರಾಜೇಶ್ ಕುಮಾರ್ ಟಿ.ಆರ್ /

ಪೂರಕ: ಅಪೂರ್ವ ಹೂಡಿಕೆದಾರ –ಪ್ರಜಾವಾಣಿ ಲೇಖನ

೪.೨: ವಾಣಿಜ್ಯ ಪತ್ರಗಳು –ಸಂ: ಸಂಪಾದಕರು /

ಪೂರಕ: ವಾಣಿಜ್ಯ ಕ್ಷೇತ್ರದಲ್ಲಿ ಪ್ರಚಾರದ ಪಾತ್ರ

**SYLLABUS**

**ವಾಣಿಜ್ಯ ಕನ್ನಡ – ೧ ಪಠ್ಯಕ್ರಮ**

**ಬಿ.ಕಾಂ ಪ್ರಥಮ ಸೆಮಿಸ್ಟರ್**

**ಪರಿವಿಡಿ**

**ಘಟಕ–೦೧ ಕನ್ನಡ ನಾಡು–ನುಡಿ ಚಿಂತನೆ**

೧.೧. ಕನ್ನಡ: ಈ ಶತಮಾನದ ಹೊಸ ಸವಾಲುಗಳು ಕೆ.ವಿ.ನಾರಾಯಣ

ಪೂರಕ: ಸೊಗಸಾದ ಕನ್ನಡ ಕೆ.ವಿ.ತಿರುಮಲೇಶ್

೧.೨. ಕಾಣಿಕೆ –ಬಿ.ಎಂ.ಶ್ರೀಕಂಠಯ್ಯ

ಪೂರಕ: ಅರುಣೋದಯ –ಬೆಟಗೇರಿ ಕೃಷ್ಣಶರ್ಮ

೧.೩) ಅನ್ಯಭಾಷಾ ವ್ಯಾಮೋಹ –ಸುಜನಾ ಪೂರಕ: ನುಡಿಯ ಗುಟ್ಟು –ಶಂ.ಬಾ. ಜೋಶಿ

**ಘಟಕ : ೦೨: ಸಂಸ್ಕೃತಿ**

೨.೧. ಪ್ರಿಯ ಪ್ರತಿಮೆಗಳ ಪ್ರೀತಿ ಕಲಿಸಿ –ಬರಗೂರು ರಾಮಚಂದ್ರಪ್ಪ

ಪೂರಕ: ಮಹೂವಾ –ಬಂಜಗೆರೆ ಜಯಪ್ರಕಾಶ ।

೨.೨. ರಾಷ್ಟ್ರೀಯತೆ: ಟ್ಯಾಗೋರ್ ಗಾಂಧೀ ಸಂವಾದ –ಡಿ. ಎಸ್. ನಾಗಭೂಷಣ

ಪೂರಕ: ಹಳ್ಳಿಗಳ ಕಣ್ಮರೆ –ಡಿ.ಆರ್.ನಾಗರಾಜ

೨.೩. ಧ್ಯಾನದಲ್ಲಿ ಕಂಡ ಜೇಡರ ಹುಳು –ಓ.ಎಲ್. ನಾಗಭೂಷಣಸ್ವಾಮಿ

ಪೂರಕ: ನಂಬಿಕೆ –ಅನು; ಮೈ.ಶ್ರೀ. ನಟರಾಜ.

**ಘಟಕ : ೦೩: ಜಾಗತೀಕರಣ**

೩.೧. ಜಾಗತೀಕರಣ ಮತ್ತು ದೇಸಿ ಶಿಕ್ಷಣ –ಡಾ. ರಾಜೇಂದ್ರ ಚೆನ್ನಿ ಪೂರಕ: ಹಣವನ್ನು ತಿನ್ನಲಾಗುವುದಿಲ್ಲ –ಡಾ. ಯು. ಆರ್. ಅನಂತಮೂರ್ತಿ

೩.೨. ಸಮಕಾಲೀನ ಸವಾಲುಗಳು –ಪೂರ್ಣಚಂದ್ರ ತೇಜಸ್ವಿ

ಪೂರಕ: ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು –ಡಾ. ಬೆಸಗರಹಳ್ಳಿ ರಾಮಣ್ಣ

೩.೩. ಮನಸ್ಸಿಗೆ ಮೂಗುದಾರ –ಡಾ. ಜೆ. ಬಾಲಕೃಷ್ಣ

ಪೂರಕ: ಅರಣ್ಯ ಮತ್ತು ಆದಿಮ ಸಂಸ್ಕೃತಿಗಳು –ಎಚ್. ಎ. ಪುರುಷೋತ್ತಮರಾವ್

**ಘಟಕ : ೦೪: ವಾಣಿಜ್ಯ**

೪.೧. ಕಡಿಮೆ ಬಂಡವಾಳದ ಹತ್ತು ರೀಟೇಲ್ ಬಿಸಿನೆಸ್ಗಳು –ಸಿದ್ದು ತೋರವ ಪೂರಕ: ರಿಟೇಲ್ ಮಾರುಕಟ್ಟೆ ಕುಸಿತ –ಶ್ರೀನಿವಾಸರಾವ್

೪.೨. ಸ್ವಸಹಾಯ ಗುಂಪುಗಳು –ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರ

ಪೂರಕ: ಮೈಕ್ರೋ ಫೈನಾನ್ಸ್: ಮ್ಯಾಕ್ರೋ ಪ್ರಾಫಿಟ್ –ಶಿವ ಸುಂದರ್

೪.೩. ಮಾರುಕಟ್ಟೆ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವ –ಎಂ. ಚಂದ್ರಪೂಜಾರಿ

ಪೂರಕ: ವ್ಯಾಪಾರಿಯ ಕನಸಿನ ಕತೆ ನಾಗಾರ್ಜುನ.

ಡಾ.ಎಸ್. ನಟರಾಜ ಬೂದಾಳು

**SYLLABUS**

**ಕಲಾ ಕನ್ನಡ –೧ ಪಠ್ಯಕ್ರಮ**

**ಪ್ರಥಮ ಸೆಮಿಸ್ಟರ್ ಬಿ.ಎ**

**ಪರಿವಿಡಿ**

**ಘಟಕ–೧ ಕನ್ನಡ ಚಿಂತನೆ**

೧. ಕನ್ನಡ ಪದಗೊಳ್ – ಜಿ.ಪಿ. ರಾಜರತ್ನಂ. ' ಪೂರಕ ಪಠ್ಯ: ಕುಣಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ (ಕವಿರಾಜಮಾರ್ಗದ ಆಯ್ದ ಭಾಗ)

೨. ಇಂಗ್ಲಿಷ್ನೊಡನೆ ಗುದ್ದಾಟದಲ್ಲಿ ದೇವನೂರು ಮಹಾದೇವ

ಪೂರಕ ಪಠ್ಯ: ಕನ್ನಡ ಮತ್ತು ವಿಕೇಂದ್ರೀಕರಣ–ಯು.ಆರ್. ಅನಂತಮೂರ್ತಿ

೩.ಕನ್ನಡದ ಉಳಿವಿಗೆ ಒಂದೇ ಹಾದಿ: ಮುಕ್ತ ಜ್ಞಾನ ಮತ್ತು ಮುಕ್ತ ತಂತ್ರಜ್ಞಾನ–ಬೇಳೂರು ಸುದರ್ಶನ.

ಪೂರಕ ಪಠ್ಯ: ತಂತ್ರಜ್ಞಾನದ ದೇಸೀಕರಣ–ಕನ್ನಡದ ಜಾಗತೀಕರಣ–ಎನ್. –

ಶಂಕರಪ್ಪ ತೋರಣಗಲ್ಲು

**ಘಟಕ–೨ ಪ್ರಕೃತಿ**

೧..ನಾವು ಮತ್ತು ಮರಗಳು –ಜಿ.ಎಸ್. ಶಿವರುದ್ರಪ್ಪ

ಪೂರಕ ಪಠ್ಯ: ನಾನೊಂದು ಮರವಾಗಿದ್ದರೆ–ಮೂಡ್ನಾಕೂಡು ಚಿನ್ನಸ್ವಾಮಿ

೨. ಬಿದಿರು ಒಂದು, ಭಾವನೆ ಹಲವು – ಬಿ.ಜಿ.ಎಲ್. ಸ್ವಾಮಿ ಪೂರಕ ಪಠ್ಯ: ಬಿದಿರು ಎಂಬ ಬೆರಗು– ಸತೀಶ್ ಜಿ.ಕೆ.ತೀರ್ಥಹಳ್ಳಿ ೩.ಒತ್ತೆಯಾಳಾಗಿ ಪರಿಸರ–ಪೂರ್ಣಚಂದ್ರ ತೇಜಸ್ವಿ

ಪೂರಕ ಪಠ್ಯ: ಪರಿಸರ ಸಂರಕ್ಷಣೆ ಮತ್ತು ರಾಜಕೀಯ ಬದ್ಧತೆ–ನಾಗೇಶ ಹೆಗಡೆ

**ಘಟಕ–೩ ಬಾಲ್ಯ**

೧. ಕೂಸಿದ್ದ ಮನೆಗೆ (ಬಾಲ್ಯವನ್ನು ಕುರಿತ ಜನಪದ ತ್ರಿಪದಿಗಳು)

ಪೂರಕಪಠ್ಯ: ಕೂಸಿನ ಕನಸು– ಕುವೆಂಪು

೨. ಕನ್ನಡ ನನ್ನ ನೆಚ್ಚಿನ ಪಾಠ– ಸಾರಾ ಅಬೂಬಕರ್

ಪೂರಕ ಪಠ್ಯ: ಸಾವಿನ ತೂಗುಕತ್ತಿಯ ಕೆಳಗೆ– ವಾರಿಸ್ಡೇರಿ

೩. ಐನೋರ ಹೊಲ – ಡಾ. ಸಿದ್ದಲಿಂಗಯ್ಯ

ಪೂರಕ ಪಠ್ಯ: ತಮಟೆ ಬಡೆಯುವುದು ತುಂಬಾಡಿರಾಮಯ್ಯ

**ಘಟಕ–೪ ಸಂಕೀರ್ಣ**

೧. ಸಂವಿಧಾನದ ಆರ್ಥಿಕ ಸ್ವಾತಂತ್ರ್ಯದ ಆಶಯಗಳು– ಡಾ. ವೆಂಕಟಾಚಲ ಹೆಗಡೆ

ಪೂರಕ ಪಠ್ಯ: ಅರ್ಥ ಸ್ವಾತಂತ್ರ್ಯ @೭೫ ಹೀಗೊಂದು ಹಿನ್ನೋಟ –ಎ. ನಾರಾಯಣ

೨. ಇತಿಹಾಸ ಅಧ್ಯಯನದ ಮುಂದುವರಿದ ಮಾದರಿಗಳು–ಗೋಪಾಲರಾವ್

ಪೂರಕ ಪಠ್ಯ: ಚರಿತ್ರೆ ಜೊತೆಗೆ ಸಾಮಾನ್ಯರ ಸೆ–ಅಗ್ರಹಾರ ಕೃಷ್ಣಮೂರ್ತಿ

೩. ರಾಜಕೀಯ ಸಿದ್ಧಾಂತಗಳು– ಹೆಚ್.ಎಸ್.ದೊರೆಸ್ವಾಮಿ

ಪೂರಕ ಪಠ್ಯ: ಒಂದು ಪುಸ್ತಕದ ಅದ್ಭುತ ಪ್ರಭಾವ–ಎಂ. ಕೆ. ಗಾಂಧಿ

**SYLLABUS**

**ಕಲಾ ಕನ್ನಡ –೩ ಪಠ್ಯಕ್ರಮ**

**ತೃತೀಯ ಬಿ.ಎ ಕನ್ನಡ**

**ಪರಿವಿಡಿ**

**ಘಟಕ ೧: ರಾಷ್ಟ್ರೀಯತೆ**

೧. ೧ : ನೆನೆವುದೆನ್ನ ಮನಂ – ಪಂಪ

ಪೂರಕ ಪಠ್ಯ : ರಾಷ್ಟ್ರ, ರಾಷ್ಟ್ರೀಯತೆ, ರಾಷ್ಟ್ರವಾದ, ಸಂವಿಧಾನ ಹೀಗೆಲ್ಲ. ಬಾಲಸುಬ್ರಹ್ಮಣ್ಯ ಕಂಜರ್ಪಣೆ

೧.೨ ಕಟ್ಟುವೆವು ನಾವು – ಗೋಪಾಲಕೃಷ್ಣ ಅಡಿಗ ಪೂರಕ ಪಠ್ಯ: ಗಾಂಧಿ ರಾಮರಾಜ್ಯದಲ್ಲಿ ರಾಮನನ್ನು ಹುಡುಕುತ್ತಾ ಗುರುಪ್ರಸಾದ್ ಡಿ.ಎನ್. – –

**ಘಟಕ ೨: ಕೃಷಿ**

೨.೧: ಬಾರಮ್ಮ ಭಾಗೀರತಿ – ಕೆ. ವೈ. ನಾರಾಯಣಸ್ವಾಮಿ ಪೂರಕ ಪಠ್ಯ: ಇಳೆಯಾಂಡ ಗುಡಿಮಾರರ ರಗಳೆ – ಹರಿಹರ

೨.೨: ನನ್ನೊಳಗೆ ಜೋಗಿ ಪ್ರಜ್ಞೆಯಾಗಿರುವ ಅಪ್ಪ – ಎಸ್. ಜಿ. ಸಿದ್ಧರಾಮಯ್ಯ ಪೂರಕ: ಒಮ್ಮೆ ನೆಲದಲ್ಲಿ ಬಿತ್ತಿದ ಬಿತ್ತುವ – ವಿವಿಧ ವಚನಕಾರರು –

**ಘಟಕ ೩: ಕ್ರೀಡೆ**

೩.೧: ಚದುರಂಗದ ಆಟಗಾರರು ಪ್ರೇಮ್ ಚಂದ್ ಪೂರಕ ಪಠ್ಯ: ಕ್ರಿಕೆಟ್ ಮತ್ತು ಕ್ರಾಂತಿ – ಹೆಚ್. ನರಸಿಂಹಯ್ಯ

೩.೨: ಜನಪದ ಆಟಗಳು: ಬದುಕಿನ ಶೋಧ ಸಂಬಂಧಗಳ ನಡುವೆ – ಡಾ. ಅರವಿಂದ ಮಾಲಗತ್ತಿ ಪೂರಕ ಪಠ್ಯ: ಜನಪದ ಕ್ರೀಡೆ ಸ್ತ್ರೀ ದೃಷ್ಟಿ – ಮಂಜುಳಾ ಶೆಟ್ಟಿ

**ಘಟಕ: ೪ ಸಂಕೀರ್ಣ**

೪.೧ ಮಹಿಳಾ ಸಬಲೀಕರಣದ ಹೆಜ್ಜೆಗಳನ್ನು ಗಟ್ಟಿಗೊಳಿಸಬೇಕಾಗಿದೆ ಉದಯಕುಮಾರ ಶೆಟ್ಟಿ

ಪೂರಕ ಪಠ್ಯ: ಭಾರತದ ಮೊದಲ ಮಹಿಳಾ ಶಿಕ್ಷಕಿ : ಸಾವಿತ್ರಿಬಾಯಿ ಫುಲೆ

– ಕಿರಣ್ ಎಂ. ಗಾಜನೂರು

೪.೨ ಭಾಷಣ ಕಲೆ ಮತ್ತು ವ್ಯಕ್ತಿತ್ವ ವಿಕಸನ– ವಿಷ್ಣು ಎಂ. ಶಿಂಧೆ ಪೂರಕ ಪಠ್ಯ: ವ್ಯಕ್ತಿತ್ವ ನಿರ್ಮಾಣ ಶಿಕ್ಷಣದ ಗುರಿ – ಸುನಂದಾ ಪ್ರಕಾಶ ಕಡಮೆ

Gururayanapura, Koluru Village, Ramohalli Post, Tavarekere Hobli, Bengaluru-560 074.
Affiliated to Bangalore University


OLD QUESTION PAPERS

**NP – 001**

**ಮೊದಲನೆ ಸೆಮಿಸ್ಟರ್ ಬಿ.ಎ. ಪರೀಕ್ಷೆ, ಮಾರ್ಚ್/ಏಪ್ರಿಲ್ 2023**
**(NEP) (2021-22 and Onwards) (F+R)**
**ಕನ್ನಡ ಭಾಷಾ ಪತ್ರ (Paper – 1)**
**ಕಲಾ ಕನ್ನಡ**

Time : 2½ Hours | Max. Marks : 60

I. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ಎಂಬತ್ತು ಪದಗಳನ್ನು ಮೀರದಂತೆ): **(4×5=20)**

1) ಮಕ್ಕಳ ಶಿಕ್ಷಣದಲ್ಲಿ ತಾರತಮ್ಯ ಮಾಡುವುದು ಸರಿಯೇ ? ವಿಶ್ಲೇಷಿಸಿ.
2) ಮುಕ್ತ ತಂತ್ರಾಂಶದಿಂದ ಆಗುವ ಪ್ರಯೋಜನಗಳೇನು ? ತಿಳಿಸಿ.
3) ಬಿದಿರು ಹೂ ಬಿಟ್ಟಿತ್ತೆಂದರೆ ಜನ ಭಯಭೀತರಾಗಲು ಕಾರಣವೇನು ?
4) ಮೈಮೇಲೆ ದೇವರು ಬರುವ ಪ್ರಸಂಗದ ಸ್ವಾರಸ್ಯವನ್ನು ತಿಳಿಸಿ.
5) ಸಂವಿಧಾನದ ಮೂಲಭೂತ ಆಶಯಗಳು ಯಾವುವು ?
6) ಸರ್ವೋದಯ ಸಿದ್ಧಾಂತವನ್ನು ಕುರಿತು ಬರೆಯಿರಿ.

II. ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ (**ನೂರ ಅರವತ್ತು** ಪದಗಳು ಮೀರದಂತೆ): **(2×10=20)**

1) ರತ್ನನ ಕನ್ನಡಾಭಿಮಾನ "ಕನ್ನಡ ಪದಗೋಳ್" ಕಾವ್ಯ ಭಾಗದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.
2) ಪರ್ಷಿಯನ್ ಕೊಲ್ಲಿಯ ಜೈವಿಕ ಜೀವಗಳ ನಾಶಕ್ಕೆ ಕಾರಣವೇನು ? ವಿವರಿಸಿ.
3) ಸಾರಾ ಅವರು ಹೈಸ್ಕೂಲಿಗೆ ಹೋಗುತ್ತಿದ್ದಾಗ ಬಂಧುಮಿತ್ರರ ಪ್ರತಿಕ್ರಿಯೆ ಹೇಗಿತ್ತು ? ವಿವರಿಸಿ.

III. ಕೆಳಗಿನ ಪತ್ಯವನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ ಸೂಕ್ತ ಶೀರ್ಷಿಕೆ ನೀಡಿ. **(3×1=3)**

ಒಂದು ಪ್ರದೇಶದ ಇತಿಹಾಸವು ಕೇವಲ ಕೆಲವೇ ಗಣ್ಯರಿಂದ ಪ್ರಭಾವಿತವಾಗಿರುವುದಿಲ್ಲ. ಗಣ್ಯರದ್ದೇ ಆದ ಇತಿಹಾಸವು ಎಲೈಟ್ ಇತಿಹಾಸ ಎನಿಸಿಕೊಳ್ಳುತ್ತದೆ. ಆಗ ಸಮಾಜಕ್ಕೆ ಕೆಳವರ್ಗದವರ ಕೊಡುಗೆ ಗಣನೆಗೇ ಬರುವುದಿಲ್ಲ. ಸೈನಿಕರನ್ನು ಸಬಾಲ್ಟರ್ನ್ ಎಂದು ಕರೆಯಲಾಗುತ್ತಿತ್ತು ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ಯುದ್ಧ ಗೆದ್ದವನು ರಾಜನಾದರೂ ಹೋರಾಡಿ, ಗೆಲುವು ತಂದುಕೊಟ್ಟವನು ಸೈನಿಕ ಎನ್ನುವುದನ್ನು ತಳ್ಳಿ


P.T.O.

UNIVERSAL SCHOOL OF ADMINISTRATION
Gururayanapura, Koluru Village, Ramohalli Post, Tavarekere Hobli, Bengaluru-560 074.
Affiliated to Bangalore University



V. ಇವುಗಳಲ್ಲಿ ನಾಲ್ಕು ಕನ್ನಡ ಪದಗಳಿಗೆ ಇಂಗ್ಲಿಷಿನ ಸಂವಾದಿ ಪದಗಳನ್ನು ಬರೆಯಿರಿ : **(1×4=4)**

1) ಕಣಿವೆ
2) ಪ್ರಾಚೀನ
3) ಭೂಗರ್ಭಶಾಸ್ತ್ರ
4) ಬರ
5) ತಳಿವಿಜ್ಞಾನ

VI. ಇವುಗಳಲ್ಲಿ ಎರಡು ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ : **(1×2=2)**

1) ಶಾಶ್ವತ
2) ಸ್ವೀಕರಿಸು
3) ಸಂಪ್ರದಾಯ.

VII. ಇವುಗಳಿಗೆ ಒಂದೊಂದು ಸರಿ ಉತ್ತರವನ್ನು ಗುರ್ತಿಸಿ ಬರೆಯಿರಿ (ಎಲ್ಲಾ ಐದು ಪ್ರಶ್ನೆಗಳಿಗೆ ಉತ್ತರಿಸಿ) : **(1×5=5)**

1) ಸಂಸ್ಕೃತ ಭಾಷೆಯನ್ನು ಬಳಸದೆ, ಕನ್ನಡದಲ್ಲಿ ಕೃತಿ ರಚನೆ ಮಾಡಿದ ಕವಿ
   ಎ) ನಂಜುಂಡ ಕವಿ   ಬಿ) ಪಂಪ   ಸಿ) ಆಂಡಯ್ಯ   ಡಿ) ಡಿ.ಎಸ್. ಕರ್ಕಿ
2) ಶುಂಪೀಟರ್ ಯಾವ ಶತಮಾನದ ಖ್ಯಾತ ರಾಜಕೀಯ ಅರ್ಥಶಾಸ್ತ್ರಜ್ಞ ?
   ಎ) 18   ಬಿ) 19   ಸಿ) 20   ಡಿ) 21
3) ಕರ್ನಾಟಕ ಸರ್ಕಾರವು ಆಹಾರ ಭದ್ರತೆಯನ್ನು ಜಾರಿಗೆ ತಂದ ವರ್ಷ
   ಎ) 2012   ಬಿ) 2013   ಸಿ) 2014   ಡಿ) 2015
4) ಸಂವಿಧಾನದ ಯಾವ ಅನುಚ್ಛೇದ ಜೀವಿಸುವ ಹಕ್ಕಿನ ಭಾಗವಾಗಿದೆ ?
   ಎ) ಅನುಚ್ಛೇದ – 18   ಬಿ) ಅನುಚ್ಛೇದ – 19
   ಸಿ) ಅನುಚ್ಛೇದ – 20   ಡಿ) ಅನುಚ್ಛೇದ – 21
5) ಪಾರ್ವತಿ, ರುಕ್ಮಿಣಿಯರ ಸಂಗಮವಾದ ತಾಣ ಯಾವುದು ?
   ಎ) ಲಿಕಾಬಲಿ   ಬಿ) ದೇಮಾಜಿ   ಸಿ) ಮಾಲಿನಿತಾನ್   ಡಿ) ಶಾಹಿನ್‌ತಾನ್

ಹಾಕಲಾಗುವುದಿಲ್ಲ. ದುಡಿಮೆಯ ಕಾರಣದಿಂದ ಆದ ವಲಸೆಯು ಸಂಸ್ಕೃತಿಯ ವಲಸೆಗೂ ದಾರಿ ಮಾಡಿತು. ಆಗ ಸೃಷ್ಟಿಯಾದದ್ದು ಅಸ್ಮಿತೆಯ ಸಮಸ್ಯೆ. ಇಂತಹ ಸಮಸ್ಯೆಗಳ ಕಾರಣದಿಂದಲೇ ಸಂಸ್ಕೃತಿಯ ಅಧ್ಯಯನವು ಸಬಾಲ್ಟರ್ನ್ ಚರಿತ್ರೆಯಲ್ಲಿ ಪ್ರಾಮುಖ್ಯತೆ ಪಡೆಯಿತು. ಕೈಗಾರಿಕೆಗಳನ್ನು ಆಶ್ರಯಿಸಿದ ಕಾರ್ಮಿಕ ವರ್ಗ, ಭೂಮಿಯನ್ನು ಆಶ್ರಯಿಸಿದ ಅಸಂಘಟಿತ ರೈತ ವರ್ಗದ ಸಮಸ್ಯೆಗಳು ಹೆಚ್ಚಾಗುತ್ತಲೇ ಇದ್ದಾಗ, ತಂತ್ರಗಾರಿಕೆ ಮತ್ತು ಸಂಸ್ಕೃತಿಗಳ ನಡುವೆ ಸಂಘರ್ಷ ಸಹಜವಾಗಿಯೇ ಇತ್ತು. ಇವೆಲ್ಲವುಗಳ ಹಿನ್ನೆಲೆಯಲ್ಲಿ ಗ್ರಾಂಶಿಯ ವಿಚಾರಗಳ ಅರ್ಥ ವಿಸ್ತಾರಗೊಂಡು ಸಬಾಲ್ಟರ್ನ್ ಹೆಸರಿನಲ್ಲಿ ಕೆಳಸ್ತರದ ಚರಿತ್ರೆ ಬೆಳೆದು ಬಂದಿದೆ. ಉಳ್ಳವರು ಮತ್ತು ಇಲ್ಲದವರ ನಡುವಿನ ಸಮಸ್ಯೆಗಳೇ ಕೆಳಸ್ತರದ ಚರಿತ್ರೆಯ ಅಧ್ಯಯನಕ್ಕೆ ಪ್ರೇರಣೆಯಾಗಿದೆ. (97 ಪದಗಳು)

IV. ಸಂಕ್ಷೇಪಿಸಿದ ಬರಹ ಆಧರಿಸಿ **ಎರಡು** ಪ್ರಶ್ನೆಗಳನ್ನು ರೂಪಿಸಿ. (2×1=2)

V. ಇವುಗಳಲ್ಲಿ **ಎರಡು** ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ. (2×1=2)

1) ಪರಮಾನಂದ
2) ಅಗ್ರಸ್ಥಾನ
3) ತಾರತಮ್ಯ
4) ದಂಗು ಬಡಿ.

VI. ಕಾಲೇಜಿನ ಗ್ರಂಥಾಲಯಕ್ಕೆ ಪರಿಷತ್ತಿನ ಪ್ರಕಟಣೆಯ ಪುಸ್ತಕಗಳನ್ನು ಕಳುಹಿಸುವಂತೆ ಕೋರಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ. (1×4=4)

VII. ಇವುಗಳಲ್ಲಿ **ನಾಲ್ಕು** ಪದಗಳಿಗೆ ಅರ್ಥ ಬರೆಯಿರಿ : (1×4=4)

1) ಪಾರುಪತ್ಯ
2) ಹಿಂಡು
3) ಪ್ರಭೇದ
4) ಪಾತಕ
5) ರಿವಾಜು
6) ಇಂಟರ್‌ನೆಟ್.

**NP – 001**

ಎರಡನೇ ಸೆಮಿಸ್ಟರ್ ಬಿ.ಎ. ಪರೀಕ್ಷೆ, ಆಗಸ್ಟ್/ಸೆಪ್ಟೆಂಬರ್ 2023
(NEP Scheme)
ಕನ್ನಡ
ಕಲಾ ಕನ್ನಡ – 2

ಸಮಯ : 2½ ಗಂಟೆಗಳು | ಗರಿಷ್ಠಾಂಕಗಳು : 60

I. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**80** ಪದಗಳಿಗೆ ಮೀರದಂತೆ). **(4×5=20)**

1) ಭೂ ಸುಧಾರಣಾ ಕಾಯ್ದೆ ಎಂದರೇನು ? ಅದರ ಪರಿಣಾಮಗಳೇನು ?
2) ಕಾಲ ಬದಲಾದಂತೆ ಮನುಷ್ಯನ ಮನಸ್ಥಿತಿ ಹೇಗೆ ಬದಲಾಗುತ್ತದೆ. 'ದಿ ಯುಗ' ಪದ್ಯದ ಹಿನ್ನೆಲೆಯಲ್ಲಿ ವಿವರಿಸಿ.
3) ಶರೀರವನ್ನು ಪುರಂದರದಾಸರು ಯಾವುದಕ್ಕೆ ಹೋಲಿಸಿದ್ದಾರೆ ?
4) ಪ್ರೀತಿಯನ್ನು ಪಡೆಯಲು ಸ್ತ್ರೀ ಪುರುಷರು ಅನುಸರಿಸುವ ಮಾರ್ಗಗಳು ಯಾವುವು ?
5) ಚಂದ್ರಾಪೀಡನಿಗೆ ದೊರೆತ ಅತಿಥಿ ಸತ್ಕಾರವನ್ನು ವರ್ಣಿಸಿ.
6) ಮಹಿಳಾ ಸಮುದಾಯ ಇನ್ನೂ ಯಾವ ಅವಸ್ಥೆಯಲ್ಲಿದೆ. ವಿವರಿಸಿ.

II. ಎರಡು ಪ್ರಶ್ನೆಗಳಿಗೆ ಉತ್ತರಿಸಿ (**160** ಪದಗಳಿಗೆ ಮೀರದಂತೆ). **(2×10=20)**

1) ಜಾಗತೀಕರಣದಿಂದ ಗುಡಿ ಕೈಗಾರಿಕೆಗಳು ನಾಶವಾಗಿವೆಯೇ ವಿವರಿಸಿ.
2) ಕಾಲ ಎನ್ನುವುದನ್ನು ಯಾವ್ಯಾವ ರೀತಿಯಲ್ಲಿ ಗುರುಪೀರಾ ತತ್ವಪದದಲ್ಲಿ ಬಳಸಲಾಗಿದೆ. ವಿವರಿಸಿ.
3) ದೊಂಬರ ಹುಡುಗಿ ಹಾಗೂ ವೆಂಕಟಶಾಮಿಯ ಪ್ರೀತಿಯ ಸ್ವರೂಪವನ್ನು ವಿವರಿಸಿ.
4) ಕನ್ನಡ ಭಾಷೆ ಬೆಳೆಸುವುದಕ್ಕೆ ಪತ್ರಿಕೆಗಳ ಕೊಡುಗೆಯೇನು ವಿವರಿಸಿ.

III. ನಿಮ್ಮ ಕಾಲೇಜಿನ ಕನ್ನಡ ಸಂಘವು ನಡೆಸಿದ ಅಂತರಕಾಲೇಜು ನಾಟಕ ಸ್ಪರ್ಧೆಯನ್ನು ಕುರಿತು ವರದಿಯನ್ನು ತಯಾರಿಸಿ. **(1×5=5)**

IV. ಕೆಳಗಿನ ಪದಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. **(4×1=4)**

1) ಸರಸಿರುಹ
2) ತರ್ಕ
3) ಸಂಕೋಲೆ
4) ಹಟ್ಟಡ
5) ವಣಕ.

P.T.O.

NP – 020

ಮೂರನೇ ಸೆಮಿಸ್ಟರ್ ಬಿ. ಕಾಂ. ಪರೀಕ್ಷೆ, ಮಾರ್ಚ್/ಏಪ್ರಿಲ್ 2023

(NEP) (2022 – 23 and Onwards) (Freshers)

ಕನ್ನಡ ಭಾಷಾ ಪತ್ಯ ಪತ್ರಿಕೆ - 3

ವಾಣಿಜ್ಯ ಕನ್ನಡ

Time : 2½ Hours | Max. Marks : 60

I. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**200** ಪದಗಳಿಗೆ ಮೀರದಂತೆ). **(2×10=20)**

1) ಅಮೆರಿಕಾದ ವಾಲ್ ಮಾರ್ಟ್ ಕಂಪನಿ ಭಾರತಕ್ಕೆ ಬರಲು ಕಾರಣವೇನು ? ವಿವರಿಸಿ.
2) ಮಾದವಿ ಸತ್ಯಾಸತ್ಯತೆಯ ವಿಚಾರಣೆಯ ಪ್ರಸಂಗವನ್ನು ವರ್ಣಿಸಿ.
3) ವಿಚಾರಣಾ ಪತ್ರ, ಎಂದರೇನು ? ಒಂದು ಮಾದರಿ ಪತ್ರದ ಮೂಲಕ ವಿವರಿಸಿ.

II. ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ (**100** ಪದಗಳಿಗೆ ಮೀರದಂತೆ). **(4×5=20)**

1) ಗಾಂಧಿ ಬದುಕನ್ನು ಆಧರಿಸಿ ಬಂದಿರುವ ಸಿನಿಮಾಗಳನ್ನು ವಿವರಿಸಿ.
2) ಸೂಪರ್ ಮಾರ್ಕೆಟ್ ಆಗಮನದಿಂದಾಗಿ ದೇಸೀ ಚಿಲ್ಲರೆ ಅಂಗಡಿಗಳ ಸ್ಥಿತಿ ಏನಾಗುತ್ತಿದೆ ಎಂದು ಬರೆಯಿರಿ.
3) ಹೋಟೇಲ್‌ನ ಕೆಸಿನೋದಲ್ಲಿ ಕುಳಿತು ನಡೆಸುವ ಸಂಭಾಷಣೆಯ ಸ್ವಾರಸ್ಯವೇನು ?
4) ಬ್ಯಾಲ್ಯಾದ ಭಾಷಾನ ಮೈಕ್‌ಸೆಟ್‌ನ ವಿಶೇಷ.
5) ಲಲಿತೆಗಾಗಿ ಕಣ್ಣ ಮಾಡಿದ ಸಾಹಸ ಹಾಗೂ ಅದರ ಪರಿಣಾಮಗಳನ್ನು ಕುರಿತು ಬರೆಯಿರಿ.
6) ಉಚಿತ ಹಣಕಾಸು ಸಲಹೆಗಳ ಪರಿಣಾಮಗಳಾವುವು ?

III. ಇವುಗಳಲ್ಲಿ ಒಂದು ವಿಷಯ ಕುರಿತು ಕಿರು ಪ್ರಬಂಧವನ್ನು ಬರೆಯಿರಿ. **(1×4=4)**

1) ಸಿನಿಮಾಗಳು
2) ಷೇರು ಮಾರುಕಟ್ಟೆ.

IV. 2022 ರ ವರ್ಷದಲ್ಲಿ, ಎಷ್ಟು ಸಂಖ್ಯೆಯ ಕೋವಿಡ್ ಪ್ರಕರಣಗಳು ದಾಖಲಾಗಿವೆ ಎಂದು ಮಾಹಿತಿ ಕೇಳಿ ನಿಮ್ಮ ಜಿಲ್ಲೆಯ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಒಂದು ಅರ್ಜಿಯನ್ನು ಮಾಹಿತಿ ಹಕ್ಕಿನಡಿ ಬರೆಯಿರಿ. **(1×4=4)**

V. ಕೆಳಕಂಡ ಸನ್ನಿವೇಶ ಎದುರಾದರೆ ನೀವು ಏನು ಮಾಡುತ್ತೀರಿ ವಿವರಿಸಿ. **(1×4=4)**

ನಿಮ್ಮ ಕಣ್ಣೆದುರೇ ಆಕಸ್ಮಿಕ ಅಪಘಾತ ಸಂಭವಿಸಿದರೆ ?

P.T.O.

# UNIVERSAL SCHOOL OF ADMINISTRATION

Gururayanapura, Koluru Village, Ramohalli Post, Tavarekere Hobli, Bengaluru-560 074.
Affiliated to Bangalore University

**NP – 003**

**II Semester B.Com. Examination, August/September 2023**
**(NEP Scheme)**
**ಕನ್ನಡ**
**ವಾಣಿಜ್ಯ ಕನ್ನಡ – 2**

Time : 2½ Hours Max. Marks : 60

I. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ಎಂಭತ್ತು ಪದಗಳಿಗೆ ಮೀರದಂತೆ) : (4×5=20)

1) ಕನ್ನಡ ನಾಡಿನ ವರ್ಣನೆ 'ಕಬ್ಬಿಗರ ಕಾವ್ಯ'ದಲ್ಲಿ ಹೇಗೆ ಮೂಡಿ ಬಂದಿದೆ ?
2) ಅತ್ತಿಮಬ್ಬೆಯ ಚರಿತೆಯನ್ನು ರನ್ನ ಹೇಗೆ ವರ್ಣಿಸಿದ್ದಾನೆ ?
3) ರಂಗೇಗೌಡ ಆಲೆಮನೆಗೆ ಬಂದವರನ್ನು ಹೇಗೆ ಉಪಚರಿಸುತ್ತಿದ್ದನು ?
4) ದುಷ್ಯಂತ ಕಣ್ವರ ಆಶ್ರಮದಲ್ಲಿ ಸಖಿಯರ ಸಂಭಾಷಣೆಯನ್ನು ಕೇಳಿಸಿಕೊಂಡ ಮಾತುಗಳನ್ನು ಬರೆಯಿರಿ.
5) ಅಷ್ಠಾವಂಕನ ಪಾತ್ರವನ್ನು ಪರಿಚಯಿಸಿ.
6) ಮಾಲಿನಿತಾನ್ ಸ್ತ್ರೀಯರ ಬಗ್ಗೆ ಲೇಖಕಿಯ ಅಭಿಪ್ರಾಯವೇನು ?

II. ಎರಡು ಪ್ರಶ್ನೆಗಳಿಗೆ ಉತ್ತರಿಸಿ (ನೂರ ಅರವತ್ತು ಪದಗಳಿಗೆ ಮೀರದಂತೆ) : (2×10=20)

1) ಸರಸವಾಣಿ ವಾಗ್ಯುದ್ಧದಲ್ಲಿ ಗೆದ್ದಿದ್ದಾಳೆ ಎಂದು ನಾಲ್ಕು ಗಿಣಿಗಳು ಯಾವ ಆಧಾರದ ಮೇಲೆ ಪ್ರತಿಪಾದಿಸುತ್ತವೆ ? ವಿವರಿಸಿ.
2) ಬದುಕಿನ ಪಥ ಬದಲಿಸುವ ಎಂಟು ಆಧುನಿಕ ತಂತ್ರಜ್ಞಾನ ಶೋಧನೆಗಳ ಬಗ್ಗೆ ವಿವರಿಸಿ.
3) ವಾಸ್ತವ ಹಾಗೂ ಕಲ್ಪನೆಗೂ ಇರುವ ಸಂಬಂಧಾಂತರಗಳನ್ನು 'ಇಬ್ಬರು ರೈತರು' ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿ.

III. ನಿಮ್ಮ ಕಾಲೇಜಿನಲ್ಲಿ ನಡೆದ ಕ್ರೀಡಾ ಚಟುವಟಿಕೆಗಳ ವಾರ್ಷಿಕ ವರದಿ ತಯಾರಿಸಿ. (1×5=5)

IV. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ : (1×4=4)

1) ಅಂಚೆ
2) ದಂತಿಪ
3) ಶಿವಕಾಮಿ
4) ಪೊಲ್ಲಮೆ
5) ಕಲಿವೆ.

P.T.O.

**NP – 017**

**IV ಸೆಮಿಸ್ಟರ್ ಬಿ.ಎ. ಪರೀಕ್ಷೆ, ಆಗಸ್ಟ್/ಸೆಪ್ಟೆಂಬರ್ 2023**
**(NEP Scheme)**
**ಕನ್ನಡ**
**ಕಲಾ ಕನ್ನಡ – 4**

Time : 2½ Hours | Max. Marks : 60

I. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ಇನ್ನೂರು ಪದಗಳಿಗೆ ಮೀರದಂತೆ). **(2×10=20)**

1) 'ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು' ಪದ್ಯಭಾಗದ ಆಶಯವನ್ನು ವಿವರಿಸಿ.

2) 'ತುತ್ತಿನ ಮರ' ಕಥೆಯಲ್ಲಿ ನಡೆದ ಜಗಳದ ಸನ್ನಿವೇಶವನ್ನು ಕುರಿತು ಬರೆಯಿರಿ.

3) ಕಾಲ ಏಕಮುಖವಾಗಿ ಚಲಿಸುತ್ತದೆ ಎಂಬುದನ್ನು 'ಈ ಕ್ಷಣ ಎಲ್ಲಿದೆ ?' ಲೇಖನದ ಹಿನ್ನೆಲೆಯಲ್ಲಿ ಬರೆಯಿರಿ.

II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ನೂರು ಪದಗಳಿಗೆ ಮೀರದಂತೆ). **(4×5=20)**

1) ಮೇರಿ ಕ್ಯೂರಿಯ ನಿಸ್ವಾರ್ಥ ವ್ಯಕ್ತಿತ್ವವನ್ನು ಕುರಿತು ಬರೆಯಿರಿ.

2) ಅಮೋಘಸಿದ್ಧನ ಜಾತ್ರೆಯ ವೈಶಿಷ್ಟ್ಯತೆಯೇನು ?

3) ಕವಿ ಕಾಲಪುರುಷನ ಸ್ಥಿತಿಯನ್ನು ಹೇಗೆ ವರ್ಣಿಸಿದ್ದಾನೆ ?

4) 'ತುತ್ತಿನ ಮರ' ಕಥೆಯಲ್ಲಿ ಮೂಡಿ ಬಂದಿರುವ ಮಳೆಯ ವರ್ಣನೆಯನ್ನು ಕುರಿತು ಬರೆಯಿರಿ.

5) ಸಾಹಿತ್ಯದಲ್ಲಿ ನಾಟಕದ ಸ್ಥಾನವೇನು ? ತಿಳಿಸಿ.

6) ಆಡಳಿತ ಭಾಷೆಯ ಲಕ್ಷಣಗಳಾವುವು ?

III. ಕೆಳಕಂಡ ಕಂಡಿಕೆಯನ್ನು ಇಂಗ್ಲಿಷಿಗೆ ಭಾಷಾಂತರಿಸಿ. **(1×4=4)**

ಕಾಲ ಅತ್ಯಂತ ಶಕ್ತಿಯುತವಾದ ಸಂಗತಿಯೆಂದು ನಾನು ನಿಮಗೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಎಂತಹ ನಿರ್ಭಾವುಕರೂ ಸಹಾ ಕಾಲದ ವಿಷಯ ಬಂದಾಗ ತೀವ್ರ ಭಾವುಕರಾಗುವುದನ್ನು ನೀವು ಗಮನಿಸಿರಬೇಕು. ಅದೂ ಕಳೆದು ಹೋದ ಕಾಲದ ಮೇಲಂತೂ ಎಲ್ಲಿಲ್ಲದ ಪ್ರೀತಿ.

IV. ಒಂದು ಕಾಲ್ಪನಿಕ ಹೆಸರಿನಲ್ಲಿ ಅಕೌಂಟೆಂಟ್ ಹುದ್ದೆಗೆ ಅರ್ಜಿ ಹಾಗೂ ಅಭ್ಯರ್ಥನ ಪತ್ರ ತಯಾರಿಸಿ. **(1×4=4)**

P.T.O.